ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 156-158
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೈಲಹಳ್ಳಿ ರೇವಣ್ಣನವರ ಒಡಪು ಕೃತಿಯ ಅವಲೋಕನ

**ಡಾ.ಮಂಜು ಜೆ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

***Abstract:***
*ಒಡಪು ಎಂಬ ಪದ 'ಬೆಡಗು' ಎಂಬುದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತದೆ. ಮದುವೆ ಸಂದರ್ಭದಲ್ಲಿ ನವದಂಪತಿಗಳು ತಮ್ಮ ಗಂಡ-ಹೆಂಡರ ಹೆಸರುಗಳನ್ನು ಒಡಪು ಕಟ್ಟಿ ಹೇಳುತ್ತಾರೆ. ಹಾಗೆ ಹೇಳದಿದ್ದರೆ ಕೇಳುವವರೂ ಬಿಡುವುದಿಲ್ಲ. ಇಲ್ಲ ಗಂಡು-ಹೆಣ್ಣುಗಳನ್ನು ಪೀಡಿಸಿ, ವ್ಯಂಗ್ಯ ಮಾಡಿ ಹೇಳುವ ಹೆಸರುಗಳ ಬಗೆ ಒಬ್ಬರಿಗೊಬ್ಬರನ್ನು ಕೆಣಕಿಸುತ್ತವೆ, ರೇಗಿಸುತ್ತವೆ. ಈ ಮೂಲಕ ಅವರಿಬ್ಬರೂ ಹತ್ತಿರವಾಗುತ್ತಾರೆ ನವದಂಪತಿಗಳ ಸಂಕೋಚ, ದೂರವಾಗಲೂ ಇದು ಸಹಕಾರಿ. ಉತ್ತರ ಕರ್ನಾಟಕದಲ್ಲಿ ಇಂದಿಗೂ ಅಧಿಕವಾಗಿ ಒಡಪುಗಳು ಬಳಕೆಯಲ್ಲಿವೆ. ಒಡಪು ಎಂಬ ಪದ 'ಬೆಡಗು' ಎಂಬುದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತದೆ.*

***Keywords:*** *ಕನ್ನಡ ಸಾಹಿತ್ಯ, ಒಡಪು, ಬೆಡಗು, ಮೈಲಹಳ್ಳಿ ರೇವಣ್ಣ*

**ಪೀಠಿಕೆ**

'ಒಡಪು' ಈ ಕಿರುಹೊತ್ತಿಗೆಯು ರೇವಣ್ಣ ಅವರು ಸಂಪಾದಿಸಿರುವ ಕೃತಿಯಾಗಿದೆ. ಜಾನಪದರು ಶ್ರಮಿಕ ಸಂಸ್ಕೃತಿಯವರು ತಮಗಾದ ಆಯಾಸವನ್ನು ಮರೆಯಲು ಹಾಡು ಹೇಳಿದರು. ಬೇಸರವನ್ನು ಕಳೆಯಲು ಕಥೆಗಳನ್ನು ಕಟ್ಟಿದರು. ತಮ್ಮ ಅನುಭವದ ಮೂಸೆಯಿಂದ ಗಾದೆಯನ್ನು ಸೃಷ್ಟಿಸಿದರು. ಬುದ್ಧಿ ಕೌಶಲವನ್ನು ಮೆರೆಯಲು ಒಗಟುಗಳನ್ನು ಬಳಸಿದರು. ಅಂತೆಯೇ ಮದುವೆ-ಮುಂಜಿಗಳಲ್ಲಿ ಮನರಂಜನೆಗಾಗಿ ಒಡಪು ಕಟ್ಟಿ ಹೆಸರನ್ನು ಹೇಳಿದರು.

ಒಡಪು ಕರ್ನಾಟಕದ ಒಂದು ವಿಶಿಷ್ಟ ಜನಪದ ಸಾಹಿತ್ಯ ಪ್ರಕಾರ ಗೀತೆ, ಕತೆ, ಗಾದೆ ಹಾಗೂ ಒಗಟುಗಳಂತೆ ಒಡಪು ಪ್ರಕಾರ ತಲೆಮಾರಿನಿಂದ ತಲೆಮಾರಿಗೆ ಬಂದಿರುವಂಥದ್ದು. ಜಾನಪದ ಗದ್ಯ ಸಾಹಿತ್ಯದ ಒಂದು ಅಂಗ. ಮದುವೆ, ಶೋಭನ, ಹೆಣ್ಣು ಮೈ ನೆರೆದಾಗ, ಮಗುವನ್ನು ತೊಟ್ಟಿಲಿಗೆ ಹಾಕುವಾಗ ಸೀಮಂತ ಮೊದಲಾದ ಸಾಂಪ್ರದಾಯಿಕ ಸಂಸ್ಕಾರಗಳೊಂದಿಗೆ ಒಡಪುಗಳ ಸಂಬಂಧವಿದೆ. ಒಡಪು ಎಂದ ಕೂಡಲೆ ಒಗಟು, ಒಡಬುಗಳು ನೆನಪಿಗೆ ಬರುವುದು ಸಹಜ. ಒಗಟು-ಒಡಬು-ಒಡಪು ಈ ಮೂರು ಸಾಹಿತ್ಯ ರೂಪಗಳನ್ನು ಒಂದೇ ಎಂದು ಭಾವಿಸುವವರು ಇದ್ದಾರೆ. ಆದರೆ ಇವು ಶಬ್ದರೂಪದಲ್ಲಿ ಸಾಮ್ಯವನ್ನು ಪಡೆದಿವೆಯಷ್ಟೆ. ಹೀಗೆ ಸಾಮ್ಯತೆ ಇದ್ದರು ಬಳಕೆಯ ಸಂದರ್ಭಗಳು ಬೇರೆ ಬೇರೆ ಎಂಬುದನ್ನು ಗಮನಿಸಬೇಕು.

'ಒಡಪು' ಎನ್ನುವ ಶಬ್ಧ 'ಪೊಡರ್ಪು' ಶಬ್ಧದಿಂದ ಬಂದಿರಬಹುದೆಂದು ವಿದ್ವಾಂಸರ ಅಭಿಪ್ರಾಯ. 'ಪೊಡರ್' ಮೂಲ ಶಬ್ಧಕ್ಕೆ 'ಪು' ಪ್ರತ್ಯಯ ಸೇರಿ 'ಪೊಡರ್ಪು' ಆಗಿದೆ. ಅದು ಮುಂದೆ ಪೊಡರ್ಪು-ಪೊಡಪು-ಒಡಪು ಎಂದಾಗಿರಬೇಕು

***Please cite this article as:*** ಮಂಜು, ಜೆ. (2026). ಮೈಲಹಳ್ಳಿ ರೇವಣ್ಣನವರ ಒಡಪು ಕೃತಿಯ ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 156–158

ಎಂಬುದು ಎಂ.ಎಸ್.ಲಠ್ಠೆಯವರ ಅಭಿಪ್ರಾಯವಾಗಿದೆ. ಡಾ.ಬೇಟಗೇರಿ ಕೃಷ್ಣಶರ್ಮ ಅವರು ಕನ್ನಡ ಜನಪದ ಸಾಹಿತ್ಯದಲ್ಲಿ ಒಡಪುಗಳು ಎಂದರೆ ಗಂಡ ಹೆಂಡಿರು ತಮ್ಮ ಹೆಸರನ್ನು ಹೇಳುವಾಗ ಹೊಂದಿಸಿ ಹೇಳುವ ಚತುರೋಕ್ತಿಗಳು. ಇದರಲ್ಲಿ ಪ್ರೀತಿ–ಸಲುಗೆ, ವಿನೋದ, ಚಟೋಕ್ತಿ ಇವೆಲ್ಲಾ ಕೂಡಿರುವುವು ಇವೂ ಕೂಡ ಸಾಹಿತ್ಯಾನ್ನದ ಸವಿಗವನೆಗಳೆ ಎನ್ನುತ್ತಾರೆ.

ಕನ್ನಡ–ಕನ್ನಡ ಕಸ್ತೂರಿ ಕೋಶದ ಪ್ರಕಾರ ಗಂಡ ಹೆಂಡಿರು ಹೆಸರನ್ನು ಹೇಳುವಾಗ ಬಳಸುವ ಚುಟುಕಗಳಿಗೆ ಒಡಪುಗಳು ಕರ್ನಾಟಕದಾದ್ಯಂತ ಪ್ರಚಾರದಲ್ಲಿರುವ ಪ್ರಮುಖ ಸಾಹಿತ್ಯ. ಮಂಗಳ ಪ್ರಸಂಗಗಳಲ್ಲಿ ಆರತಿ ಬೆಳಗುವ ಸಂದರ್ಭಗಳಲ್ಲಿ ಮುತ್ತೈದೆಯಾದವರು ಗಂಡನ ಹೆಸರನ್ನು ನೇರವಾಗಿ ಹೇಳದೆ ಅವನ ಗುಣ ಸ್ವಭಾವಕ್ಕೆ ಒಪ್ಪುವ ಹಾಗೆ ವಿಶೇಷಣಕ್ಕೆ ಒಡಪು ಹಚ್ಚಿ ಹೆಸರು ಹೇಳುವುದನ್ನು ಕಾಣುತ್ತೇವೆ. ಉದಾಹರಣೆಗೆ ನೋಡುವುದಾದರೆ

***"ವನ್ನ ನಾರಿ ವನ ಶೃಂಗಾರಿ***
***ಅಂಗಾರುಳ್ಳ ಬಂಗಾರುಗೆಜ್ಜೆ***
***ಸಾಲು ಮುತ್ತೈದೆಯರು***
***ಸೆರಗಿಡಿದು ಕೇಳ್ವಾಗ***
***ನಾನ್ಹೇಳಲಿ? ನಮ್ಮ ರಾಯರ ಹೆಸರು"***[1]

ಹೀಗೆ ಕಾವ್ಯಾತ್ಮಕವಾಗಿ ಒಡಪು ಕಟ್ಟಿ ಕೊನೆಯಲ್ಲಿ ಹೆಸರು ಹೇಳುತ್ತಾಳೆ. ಇಲ್ಲಿ ಆಕೆಯ ಅನುಭವ ಅಪಾರವಾದುದು. ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಮುತ್ತೈದೆಯರು ಗಂಡು–ಹೆಣ್ಣಿನ ಜೀವನದಲ್ಲಿ ಅನುಭವಿಸುವ ಸಿಹಿ–ಕಹಿ, ಶೃಂಗಾರ ಹಾಸ್ಯ, ವಿಡಂಬನೆಗಳನ್ನು ಒಡಪುಗಳ ಮೂಲಕ ಅಭಿವ್ಯಕ್ತಿಸುತ್ತಾರೆ. ಅಲ್ಲಿ ನೆರೆದ ಸಮಾಜ ಬಾಂಧವರನ್ನು ಖುಷಿಗೊಳಿಸುವಲ್ಲಿ ಯಶಸ್ವಿಯಾಗುತ್ತಾರೆ. ಒಡಪು ಆಯಾಯ ಸಂದರ್ಭಕ್ಕೆ ಮತ್ತು ಅನುಭವಕ್ಕೆ ತಕ್ಕ ಹಾಗೆ ಬಳಕೆಯಾಗುವುದನ್ನು ಗಮನಿಸಬಹುದು.

"ಜಾನಪದದ ಯಾವುದೇ ಪ್ರಕಾರಗಳ ವರ್ಗೀಕರಣ ಇದೆ ಅಂತಿಮ ಎಂದು ಹೇಳಲಾಗದು. ಈವರೆಗಿನ ಅಧ್ಯಯನ ಕೂಡ ಅನುಕೂಲಕಷ್ಟೇ ಸೀಮಿತವಾದವು ಎಂಬುದು ತಿಳಿದ ಸಂಗತಿಯಾಗಿದೆ. ಈ ಮಾತುಗಳು ಒಡಪುಗಳ ಅಧ್ಯಯನಕ್ಕೂ ಅನ್ವಯಿಸುತ್ತದೆ."[2] ಒಡಪು ಹೇಳುವವರನ್ನು ಮೂರು ಗುಂಪುಗಳಾಗಿ ಗುರುತಿಸಬಹುದು ಹೆಂಗಸರು ಹೇಳುವ ಒಡಪುಗಳು, ಗಂಡಸರು ಹೇಳುವ ಒಡಪುಗಳು ಹಾಗೂ ಮದುಮಕ್ಕಳು ಹೇಳುವ ಒಡಪುಗಳು. ದಾಂಪತ್ಯ, ಪ್ರೇಮ, ಗಂಡನ ಗುಣಗಾನ, ಆತನ ಮೊಂಡುತನ, ಉಡುಗೆ ತೊಡುಗೆ, ತಿನಿಸು–ಉಣಿಸು, ಕ್ರೀಡೆ–ಕಲೆ, ದೇವರು, ಧರ್ಮ, ನ್ಯಾಯ, ನೀತಿ, ಹಾಸ್ಯ ವಿಡಂಬನೆ ವಿಷಯಗಳು ಕಂಡುಬರುತ್ತವೆ.

ಒಡಪುಗಳ ಮುಖ್ಯ ಆಕರ್ಷಣೆ ಪ್ರಾಸಬದ್ಧತೆ, ಹಳ್ಳಿಗರ ಪ್ರಾಸ, ಮೋಹ ಅನೇಕ ಒಪಡುಗಳಲ್ಲಿ ಒಡೆದು ಕಾಣುತ್ತದೆ. ಸಾಮಾನ್ಯವಾಗಿ ಗ್ರಾಮೀಣರ ಒಡಪುಗಳಲ್ಲಿ ಹೆಚ್ಚಾಗಿ ಅರ್ಥ ಹುಡುಕುವುದು ಸಾಧ್ಯವಾಗುವುದಿಲ್ಲ. ಇವುಗಳಲ್ಲಿ ಗ್ರಾಮೀಣ ಭಾಷೆ, ಗ್ರಾಮೀಣ ಪರಿಸರ, ಗ್ರಾಮದೇವತೆಗಳ ಹೆಸರು, ಒಡವೆ ವಸ್ತ್ರಗಳು ಆಹಾರ ಪಾನೀಯಗಳ ವೈವಿಧ್ಯತೆ ಕಂಡುಬರುತ್ತದೆ.

ಒಡಪುಗಳ ಅಧ್ಯಯನದಿಂದ ಸಾಹಿತ್ಯ ಪ್ರೇಮಿಗಳಿಗೆ ಸಮಾಜ ವಿಜ್ಞಾನಿಗಳಿಗೆ ಸಾಕಷ್ಟು ಉಪಯೋಗವಿದೆ. ಸಮಾಜದಲ್ಲಿ ಗಂಡು ಹೆಣ್ಣಿನ ಸ್ಥಾನಮಾನ ಒಬ್ಬೊಬ್ಬರು ವಿಶಿಷ್ಟ ಪ್ರಸಂಗಗಳಲ್ಲಿ ನಡೆದುಕೊಳ್ಳುವ, ನಡೆಸಿಕೊಳ್ಳುವ ಬಗೆ ಮುಂತಾದವುಗಳನ್ನು ಒಡಪು ಸಾಹಿತ್ಯದಿಂದ ತಿಳಿಯಬಹುದು. ಹಾಗೆ ನೋಡಿದರೆ

[1]. ಮೈಲಹಳ್ಳಿ ರೇವಣ್ಣ, ಒಡಪು, ಪು.14

[2]. ಮೈಲಹಳ್ಳಿ ರೇವಣ್ಣ ಅವರ ಸಾಹಿತ್ಯ, ಡಾ.ಮಂಜು.ಜೆ, ಪು.105

ಭಾಷಾವಿಜ್ಞಾನದ ಅಭ್ಯಾಸದ ದೃಷ್ಟಿಯಿಂದಾಗಿ ಒಡಪುಗಳು ಪ್ರಮುಖ ಸ್ಥಾನ ಪಡೆಯುತ್ತವೆ. ಭಾಷಾ ವಿಜ್ಞಾನಕ್ಕೆ ಮೂಲ ಸಾಮಾಗ್ರಿ ಆಡುನುಡಿ ಮತ್ತು ಆಡುನುಡಿಯಲ್ಲಿ ಅಭಿವ್ಯಕ್ತಿಗೊಂಡ ಜನಪದ ಸಾಹಿತ್ಯ ಒಡಪು ಸಹ ಆಡುನುಡಿಯ ಸಾಹಿತ್ಯಕ ರೂಪಕಗಳಲ್ಲೊಂದು ಎಂಬುದು ಇಲ್ಲಿ ಮುಖ್ಯವಾಗುತ್ತದೆ.

**ಉಪಸಂಹಾರ:**

ಮೈಲಹಳ್ಳಿ ರೇವಣ್ಣನವರ 'ನಮ್ಮ ಒಡಪುಗಳು' ಚಿಕ್ಕ ಪುಸ್ತಕವಾಗಿದ್ದರು ಅದು ಒಡಪುಗಳ ಮಹತ್ವವನ್ನು ತಿಳಿಸಿಕೊಡುತ್ತದೆ. ಹಾಸ್ಯ ಚಮತ್ಕಾರ, ಧಾರ್ಮಿಕ ಶ್ರದ್ಧೆ ಮೊದಲಾದವು ಇವುಗಳಲ್ಲಿ ವ್ಯಕ್ತವಾಗುತ್ತವೆ. ವಿಶೇಷವೆಂದರೆ ಚಿತ್ರದುರ್ಗ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಯ ದಲಿತ ಜನಾಂಗದವರಿಂದ ಸಂಗ್ರಹಿಸಿರುವುದು. ಈ ಸಂಕಲನದಲ್ಲಿರುವ ಒಡಪುಗಳು ಆಯಾಯ ಸಂದರ್ಭಕ್ಕೆ ಅನುಭವಕ್ಕೆ ತಕ್ಕ ಹಾಗೆ ಅಭಿವ್ಯಕ್ತಿಗೊಂಡಿವೆ. ಗಾದೆ ಒಗಟುಗಳಂತೆ ಇವು ಕೂಡ ದಾಂಪತ್ಯ ಜೀವನದ ಸುಖ ದುಃಖಗಳ ಸಂಗಮವಾಗಿ ಗ್ರಾಮೀಣ ಜನರ ಸಂಸ್ಕೃತಿಯನ್ನು ಭಾಷಿಕ ರೂಪವನ್ನು ಯಥಾವತ್ತಾಗಿ ಚಿತ್ರಿಸುತ್ತವೆ.

**ಪರಾಮರ್ಶನ ಗ್ರಂಥಗಳು:**


- ಮೈಲಹಳ್ಳಿ ರೇವಣ್ಣ. (2009). *ಒಡಪು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಮೈಲಹಳ್ಳಿ ರೇವಣ್ಣ. (2011). *ಚಿತ್ರದುರ್ಗ ಜಿಲ್ಲೆಯ ಜನಪದ ಸಾಹಿತ್ಯ.* ವಿಜಯನಗರ.
- ಮೈಲಹಳ್ಳಿ ರೇವಣ್ಣ. (2012). *ಜನಪದ ಗಾದೆ ಮತ್ತು ಒಗಟುಗಳು.* ಪ್ರೇಮ ಪ್ರಕಾಶನ.
- ರಾಜಪ್ಪ ದಳವಾಯಿ. (2018). *ಕನ್ನಡ ಸಾಹಿತ್ಯಕೋಶ.* ಲಾವಣ್ಯ ಮುದ್ರಣ.